# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 166 ಕರೀಸಂದ್ರ, ವಾರ್ಡ್ ಕಛೇರಿ, ಬೆಂಗಳೂರು,**

**ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 09.05.2022 ರಂದು ಬೆಳಗ್ಗೆ 11:00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ನವೀನ್ – ಸಹಾಯಕ ಅಭಿಯಂತ್ರರರು ಮತ್ತು ಸಂಚಾಲಕರು (ವಾರ್ಡ್ 166 ಕರೀಸಂದ್ರ)
3. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
4. ಶ್ರೀ. ಬಾಬು – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)
5. ಘನತ್ಯಾಜ್ಯವಸ್ತು ವಿಲೇವಾರಿ ಸೂಪರ್‌ವೈಸರ್‌ಗಳು– (ವಾರ್ಡ್ 166 ಕರೀಸಂದ್ರ)
6. ಶ್ರೀ ಸೈಯ್ಯದ್ – ಕಿ.ಅ., ಬೆಂಗಳೂರು ನೀರು & ಒಳಚರಂಡಿ ಮಂಡಳಿ
7. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

***ಗೈರು ಹಾಜರಿದ್ದ ಅಧಿಕಾರಿಗಳು:-***

1. ಶ್ರೀ. ರಾಜಶೇಖರ್ – ಕಂದಾಯ ಪರಿವೀಕ್ಷಕರು (ವಾರ್ಡ್ 166 ಕರೀಸಂದ್ರ)
2. ಶ್ರೀ. ರುದ್ರೇಶ್ – ಸಹಾಯಕ ಅಭಿಯಂತ್ರರರು (ಬೆಸ್ಕಾಂ)
3. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ/ಬನಶಂಕರಿ ಪೊಲೀಸ್ ಅಧಿಕಾರಿಗಳು.

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 166 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಈ ಹಿಂದಿನ ಸಭೆಯಲ್ಲಿ ನಡೆಯದ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿದೆ. ಅಧಿಕಾರಿಗಳಿಗೆ ನಿಗಧಿತ ಅವಧಿಯೊಳಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ಕೋವಿಡ್–19 ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.

ಅಂಬೇಡ್ಕರ್‌ನಗರ, ಕಾವೇರಿನಗರ, ಪಾರ್ಕ್‌ಗಳ ಹತ್ತಿರ ಇರುವ ಕೊಳಚೆ ಪ್ರದೇಶಗಳಲ್ಲಿ ಹಾಗೂ 30ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್‌ನಲ್ಲಿ ನಿಲ್ಲುವ ಕಸದ ಲಾರಿ ಹತ್ತಿರ ನೀರು ನಿಲ್ಲುವಂತ ಜಾಗಗಳ ಸುತ್ತಾ ಮುತ್ತ ಔಷಧಿ ಸಿಂಪಡಣೆಗೆ ಆದೇಶಿಸಲಾಯಿತು.

ಕ್ರಮ: ಆರೋಗ್ಯಾಧಿಕಾರಿಗಳು (ಪದ್ಮನಾಭನಗರ)

2. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.**

ಎ.ಕೆ. ಕಾಲೋನಿ, ಕಾವೇರಿನಗರ 8ನೇ, 9ನೇ ಮತ್ತು 10ನೇ ಅಡ್ಡರಸ್ತೆಗಳಲ್ಲಿ ಕುಡಿಯುವ ನೀರನ್ನು ಕ್ರಮವಾಗಿ ಬಿಡಲು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸೂಚಿಸಲಾಯಿತು.

**ಕ್ರಮ: ಸ.ಅ & ಸ.ಕಾ.ನಿ.ಅ (ಬಿಡಬ್ಲ್ಯೂಎಸ್‌ಎಸ್‌ಬಿ)**

3. **ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

- ಅಂಬೇಡ್ಕರ್ ನಗರ ಮತ್ತು ಇಂಡಸ್ಟ್ರಿಯಲ್ ಪಾಯಿಂಟ್ ಗಳಲ್ಲಿ ಡೆಬ್ರಿಸ್ ಅನ್ನು ತುರ್ತಾಗಿ ತೆಗೆಯಲು ಸೂಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ ಅಂಡ್ ಟ್ರಾಕ್ಟರ್‌ಗಳು ಕಾರ್ಯನಿರ್ವಹಿಸಿರುವ ಬಗ್ಗೆ ಮಾಹಿತಿಯನ್ನು ಕೇಳಲಾಯಿತು.
- ಘನತ್ಯಾಜ್ಯ ಮೇಲ್ವಿಚಾರಕರು ಹಾಗೂ ಹೊಸದಾಗಿ ಬಂದಿರುವ ಮಾರ್ಷಲ್‌ಗೆ ವಾರ್ಡ್ ವ್ಯಾಪ್ತಿಯ ಎಲ್ಲಾ ಬ್ಲಾಕ್ ಪಾಯಿಂಟ್ಸ್‌ಗಳಿಗು ಭೇಟಿ ನಿಡಿ ಪರಿಶೀಲಿಸಲು ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ (ಘನತ್ಯಾಜ್ಯ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು**

4. **ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.**

- ವಾರ್ಡ್ ವ್ಯಾಪ್ತಿಯ 30ನೇ ಅಡ್ಡರಸ್ತೆಯಲ್ಲಿ ಕಸದ ಲಾರಿ ನಿಲ್ಲಿಸಲಾಗುತ್ತಿದ್ದು, ಸದರಿ ಸ್ಥಳದಲ್ಲಿ ಮಳೆ ಬಂದಾಗ ನೀರು ಹೋಗದೇ ನೀರು ನಿಲ್ಲುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ. ಆದ್ದರಿಂದ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲು ಅಭಿಯಂತರರಿಗೆ ಸೂಚಿಸಲಾಯಿತು.
- 11ನೇ ಅಡ್ಡರಸ್ತೆ, 6ನೇ ಅಡ್ಡರಸ್ತೆ, 1ನೇ ಎ ಮುಖ್ಯರಸ್ತೆ, 2ನೇ ಬಿ ಮುಖ್ಯರಸ್ತೆಗಳು ಬಹಳಷ್ಟು ದುರಸ್ಥಿಯಾಗಿದ್ದು ಡಾಂಬರೀಕರಣ ಮಾಡಳು ಅತ್ಯವಶ್ಯಕವಾಗಿರುತ್ತದೆ. ಕಾಮಗಾರಿ ಪ್ರಾರಂಭದ ಬಗ್ಗೆ ಪರಿಶೀಲಿಸಿ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸಲು ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ & ಸ.ಅ (ವಾರ್ಡ್ 166)**

5. **ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.**

- 6ನೇ ಮತ್ತು 10ನೇ ಅಡ್ಡರಸ್ತೆ ಜಯನಗರ 7ನೇ ಬ್ಲಾಕ್‌ನಲ್ಲಿ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

**ಕ್ರಮ: ಅರಣ್ಯ ಅಧಿಕಾರಿ (ದಕ್ಷಿಣ-ಬಿಬಿಎಂಪಿ)**

ವಾರ್ಡ್‌ನ_ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಸಮಸ್ಯೆಗಳಾದಲ್ಲಿ ವಾರ್ಡ್ ಕಛೇರಿಯಲ್ಲಿ ರಿಜಿಸ್ಟರ್ ಪುಸ್ತಕದಲ್ಲಿ ದಾಖಲಿಸಿ ನಿರ್ವಹಣೆ ಮಾಡಲು ಕಾರ್ಯದರ್ಶಿರವರಿಗೆ ಸೂಚಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ಎಲ್ಲರಿಗೂ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು
ವಾರ್ಡ್ ಸಂಖ್ಯೆ 166

ನೋಡೆಲ್ ಅಧಿಕಾರಿ
ವಾರ್ಡ್ ಸಂಖ್ಯೆ 166